dtd- 382
T.P-2

Reg B G No. 155

2-10-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದೇಶಾದಂತ ಗಾಂಧಿ ಜಯಂತಿ ಆಚರಣೆ

ಗಾಂಧೀ ಜಯಂತಿ ಸಪ್ತಾಹ

ಮೈಸೂರು— ಇಂದಿನಿಂದ ತಾ|| 9 ರ ವರೆಗೆ ಇದೇ ಪ್ರಥಮ ಬಾರಿಗೆ ಗಾಂಧೀ ಜಯಂತಿ ಮಹೋತ್ಸವವನ್ನು ಪೌರಸಭೆಯವರು ಆಚರಿಸಲಿದ್ದಾರೆ.

★

ಗಾಂಧೀಜಿ

ಶತಮಾನೋತ್ಸವ ಪ್ರಾರಂಭದ ಇಂದು. ಮಹಾತ್ಮಾ ಗಾಂಧೀಜಿಯವರಿಗೆ ವಿಶ್ವವು ನಮಿಸುತ್ತಿದೆ.

ಗಾಂಧೀಜಿಯವರು ನಾಡಿನ ಸ್ವಾತಂತ್ರ್ಯ ಸಾಧನೆಯ ಹಾದಿಯಲ್ಲಿ ಸತ್ಯ ಅಹಿಂಸೆ ಹಾಗೂ ಅಸಹಕಾರಗಳ ಅಸ್ತ್ರಗಳನ್ನು ಇಡೀ ಜಗತ್ತೇ ಚಿಕಿತಗೊಳ್ಳುವಂತೆ ಅತ್ಯಮೋಘವಾದ ರೀತಿಯಲ್ಲಿ ಪ್ರಯೋಗಿಸಿದರು : ಅವರ ಶತಮಾನೋತ್ಸವವು ಅನೇಕ ಕಡೆ ನಡೆಯಲಿದೆ.

ಗಾಂಧೀಜಿಯವರು ಗತಿಸಿಹೋಗಿ ಎರಡು ದಶಕಗಳು ಕಳೆಯುವಷ್ಟರಲ್ಲಿಯೇ ಜನರು ತಮ್ಮ ಬದುಕಿನಲ್ಲಿ ಆದರ್ಶವಾದವನ್ನು ತುಂಬಲು ಹಿಂಜರಿಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾವು ಗಾಂಧೀ ಮಾರ್ಗ ಬಿಟ್ಟು ಬೇರೆ ಮಾರ್ಗ ಹಿಡಿದಿದ್ದೇನೆ ಎಂದು ಕೆಲವರು ಭಾವಿಸಿದ್ದಾರೆ : ಇನ್ನೂ ಹಲವರು ಅನತಿದೂರದ ಕಾಲದಲ್ಲಿ ಗಾಂಧೀ ಮಾರ್ಗವನ್ನು ಪೂರ್ತಿ ತ್ಯಜಿಸಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ — ನಮ್ಮ ಜೀವನಕ್ಕೆ ಮೂಲಾಧಾರವಾಗಿರುವ ಉದಾತ್ತ ಧ್ಯೇಯದಿಂದ ಕೂಡಿರುವ ಮಹಾತ್ಮಾ ಗಾಂಧೀಜಿಯವರು ಜೀವನ ತತ್ವಗಳನ್ನು ನಾವು ಮುಂತೆರೆ ಅವರಿಂದ ಕೇಡು ನನುಗೇ — ಗಾಂಧೀಜೀಯವರು ನಮ್ಮನ್ನು ಧೂಳಿನಿಂದ ಮೇಲಕ್ಕೆತ್ತಿ ಮನುಷ್ಯರನ್ನಾಗಿ ಮಾಡಿದರು — 'ಸತ್ಯ" ಅವರ ಪ್ರಥಮ ಸಂಶೋಧನೆಯಾಗಿದೆ ; ಎಲ್ಲ ಕಾರ್ಯಗಳ ಮೂಲ ಸತ್ಯವಾಗಿರಬೇಕೆಂದು ಅವರು ಪ್ರತಿಪಾದಿಸಿ ಆ ರೀತಿ ಆಚರಿಸಿ ತೋರಿಸಿದರು — ಮಹಾತ್ಮಾಜಿಯವರ ದ್ವಿತೀಯ ಸಂಶೋಧನೆ "ಅಹಿಂಸೆ" ; ಎಲ್ಲರನ್ನೂ ಪ್ರೀತಿಸುವುದೇ ಅಹಿಂಸೆ — ಎಲ್ಲ ಪ್ರಸಂಗಗಳಲ್ಲಿಯೂ ಗಾಂಧೀಜಿ ಸತ್ಯ ಮತ್ತು ಅಹಿಂಸೆಯ ಧರ್ಮ ಆಚರಿಸಿ ಪ್ರತಿಪಕ್ಷೀಯ ಮನದ ವೈರತ್ವವನ್ನೂ ಕಳೆದರು — ಪ್ರತಿಯೊಬ್ಬರಿಗೂ ಸಮಾನ ಅಂತಸ್ತು, ಸಮಾನ ಅನಕಾಶ, ವಿಕಾಸಕ್ಕೆ ಬೇಕಾದ ಸಮಾನ ಸ್ವಾತಂತ್ರ್ಯ ಇರಬೇಕೆಂದರು ಗಾಂಧೀಜಿ — ಐಹಿಕ ಸಂಪತ್ತಿಗಿಂತ ನೈತಿಕ ಮೌಲ್ಯದ ಹೆಚ್ಚಳವನ್ನು ಎತ್ತಿತೋರಿಸಿದರು ; ಸತ್ಯದ ಸೌಂದರ್ಯವನ್ನೂ ಮನುಷ್ಯ ಚೈತನ್ಯದ ಶ್ರೇಷ್ಠತೆಯನ್ನೂ ಗಾಂಧೀಜಿ ಪ್ರಕಾಶಗೊಳಿಸಿದರು — ನೈತಿಕ ಸಮರ್ಥನೆಹೊಂದದ ಯಾವ ಕಾರ್ಯವನ್ನೂ ಗಾಂಧೀಜಿ ಕೈಗೊಳ್ಳಲಿಲ್ಲ. [ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯರ ಲೇಖನದಿಂದ ಆರಿಸಿದ್ದು]

ಈ ಸಂದರ್ಭದಲ್ಲಿ ಪ್ರತಿಯೊಬ್ಬ ಪ್ರಾಮಾಣಿಕ ಭಾರತೀಯನೂ ಮುಖ್ಯವಾಗಿ 'ಓ ಮಹಾತ್ಮಾ, ವಿಶ್ವಕ್ಕೆ ಇಂದು ನಿನ್ನ ಅಗತ್ಯ ಹೆಚ್ಚಿದೆ" ಎಂದು ಪ್ರಾರ್ಥನೆ ಮಾಡುತ್ತಾನೆ — ಧನವು ಮಾನವನಿಗೆ ಒಂದು ಮೂಲಭೂತವಾದ ಅಗತ್ಯ. [ಕಾರ್ಡಿನಲ್ ಗ್ರೇಷಿಯಾಸ್]

●

ಪದ್ಮಭೂಷಣ ಡಾ || ಮೋದಿ

ಪದ್ಮಭೂಷಣ ಡಾ || ಎಂ ಸಿ ಮೋದಿಯನರು ಸೆಪ್ಟಂಬರ್ ತಿಂಗಳಲ್ಲಿ ದೊಡ್ಡಬಳ್ಳಾಪುರದಲ್ಲಿ ನಡೆಸಿದ ಉಚಿತ ನೇತ್ರ ಆಪರೇಷನ್ ಕ್ಯಾಂಪಿನಲ್ಲಿ 355 ಮಂದಿಗೆ ವಿವಿಧ ರೀತಿಯ ಆಪರೇಷನ್ ನಡೆಸಿದರು — ಒಟ್ಟು ನೇತ್ರ ಪರೀಕ್ಷೆ 3750 ; ಉಚಿತವಾಗಿ ಔಷಧಿ ಕೊಟ್ಟದ್ದು 655 ; ಉಚಿತ ಭೋಜನ ಒದಗಿಸಿದ್ದು 5680.

ಟೀಟೋರ ಪಾದರಕ್ಷೆಗಳು

ಕಮ್ಯೂನಿಸ್ಟರಲ್ಲಿ ಅತಿ ಶ್ರೀಮಂತರಾಗಿರುವ ಗೋಪ್ಲೊವಿಯಾ ಅಧ್ಯಕ್ಷ ಮಾ || ಟೀಟೋರು ತುಂಬಾ ಬೆಲೆಬಾಳುವ 1000 ಜೊತೆ ಪಾದರಕ್ಷೆಗಳನ್ನು ಹೊಂದಿದ್ದಾರೆ.

ಹೆಚ್ಚು ಸಕ್ಕರೆ

ನವದೆಹಲಿ— ರೇರ್ಷ ಬೆಲೆಯಲ್ಲಿ ಹೆಚ್ಚು ಸಕ್ಕರೆ ಹಂಚುವದಕ್ಕಾಗಿ ಸರ್ಕಾರವು ಸಕ್ಕರೆ ಗಿರಣಿಗಳಿಂದ ಲೆವಿ ಪಡೆಯುವುದನ್ನು ಶೇಕಡ 60 ರಿಂದ 70 ಕ್ಕೆ ಹೆಚ್ಚಿಸಲಾಗಿದೆ.

ಜಂಬೂಸವಾರಿ

ಮೈಸೂರು— ನಿನ್ನೆ ಸಂಜೆ ನಡೆದ ಜಂಬೂಸವಾರಿಯು ಅತ್ಯಂತ ಸೌತ್ರಾನಂದಕರವಾಗಿಯೂ ವೈಭವವಾಗಿಯೂ ಇತ್ತು ; ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ವೊಡೆಯರ್ ಬಹದ್ದೂರ್ ಸುಂದರ ಉಡುಪು ಧರಿಸಿ ಆನೆಯ ಮೇಲೆ ಶೃಂಗರಿಸಲ್ಪಟ್ಟ ದ್ದ ಅಂಬಾರಿಯಲ್ಲಿ ತಮ್ಮ ಪುತ್ರ ಶ್ರೀ ಶ್ರೀಕಂಠದತ್ತ ನರಸಿಂಹರಾಜರೊಡನೆ ಅಲಂಕರಿಸಿದ್ದರು — ಮೆರವಣಿಗೆಯ ಪ್ರಾರಂಭದಲ್ಲಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲ್‌ರವರು ಶ್ರೀಮನ್ಮಹಾರಾಜರವರಿಗೆ ಹೂವಿನ ಹಾರ ಅರ್ಪಿಸಿದರು — 21 ಕುಶಾಲ ತೋಪುಗಳು ಹಾರಿಸಲ್ಪಟ್ಟವು — ಬನ್ನೀಮಂಟಪದ ನಾಲ್ಕು ಮೈಲಿ ಉದ್ದದ ರಸ್ತೆಯ ಎರಡು ಪಕ್ಕಗಳಲ್ಲೂ ವರ್ಣರಂಜಿತ ದೀಪಗಳಿದ್ದು ಸಹಸ್ರಗಟ್ಟಲೆ ಜನರು ನಿಂತಿದ್ದು ಜಂಬೂಸವಾರಿ ನೋಡಿ ಆತ್ಯಾನಂದಭರಿತರಾದರು — ಬನ್ನೀಮಂಟಪದಲ್ಲಿ ಶ್ರೀಮನ್ಮಹಾರಾಜರವರು ಶಮೀ ಪೂಜೆಯನ್ನು ನೆರವೇರಿಸಿದರು — ಟಾರ್ಚ್‌ಲೈಟ್ ಪೆರೇಡು ನಡೆಯಿತು — ಗೌರ್ನರ್ ಪಠಕ್ ರವರು ಹಾಜರಿದ್ದರು — ವಾಪಸ್ಸು ಮೆರವಣಿಗೆಯು ಮತ್ತೂ ಆಡಂಬರವಾಗಿದ್ದಿತು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು; ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಕುರುಕ್ಷೇತ್ರ— ಬದ್ರಿನಾಥ್ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ಗೋರಕ್ಷಣ ಸಮ್ಮೇಳನದಲ್ಲಿ ಗೋಹತ್ಯ ನಿರೋಧಕ್ಕೆ ಬಗ್ಗೆ ಮತ್ತೆ ಚಳವಳಿ ಪ್ರಾರಂಭಿಸಲು ನಿರ್ಧರಿಸಲಾಯಿತು.

ಗೋವು ಸರ್ವ ದೇವಾತ್ಮಕವಾದದ್ದು ; ಅದರ ಸಮೃದ್ಧಿಯಿಂದಲೇ ಸಂಪತ್ತು ವೃದ್ಧಿಯಾಗುತ್ತದೆ ; ಪವಿತ್ರ ಭರತಖಂಡದಲ್ಲಿ ಗೋಹತ್ಯ ನಡೆಯಬಾರದು.

ಹಿಂದೆ ಬಾ ಇದಲ್ಲ ಪಶುಸಂಪತ್ತು ಹೀಗಿತ್ತು

ಕನ್ಯಾದಾನ ಸಮಯ ಧನಂಜಯ ಶೇಟರವರು ಕೊಟ್ಟ ಗೋದಾನಗಳ ಉಲ್ಲೇಖದ ಮೇಲಿಂದ, ಭೌತ್ಥ ಕಾಲದ ಭಾರತದೊಳಗೆ ಇರುವ ಗೋಸಂಪತ್ತಿಯ ಕಲ್ಪ ದೊರೆಯುತ್ತದೆ. ಧನಂಜಯ ಶೇಠರು ವರನಿಗೆ ಕನ್ನಿಕೆಯ ವಿವಾಹ ಕಾಲದಲ್ಲಿ ಗೋದಾನ ಕೊಡುವಾಗ, ಸೇವಕರನ್ನು ಈ ರೀತಿ ಆಜ್ಞೆ ಮಾಡಿದ ಉಲ್ಲೇಖ ದೊರೆಯುತ್ತದೆ— "ಹೋಗಿರಿ, ಕಣ್ಣಾ ಗೋಕುಲದ ಬಾಗಿಲುಗಳನ್ನು ತೆರೆಯಿರಿ ; ಒಂದೊಂದು ಹರಿದಾರಿ ಅಂತರದಲ್ಲಿ ನಗಾರಿಗಳನ್ನು ಹಿಡಿದು ಎರಡೂ ಪಕ್ಕಗಳಲ್ಲಿ ನಿಂತು ನಡುವೆ 140 ಮಾರು ಅಗಲ ಸ್ಥಳ ಬಿಡಿರಿ ; ಗೋವು ಹರಡಿ ದೂರ ಹೋಗದಂತೆ ಜಾಗ್ರತೆ ಇಡಿರಿ ; ಹೀಗೆ ನೂರು ಹರಿದಾರಿಗಳಷ್ಟು ಮಾರ್ಗದ ಮೇಲೆ ಎಲ್ಲ ಜನರು ಸರಿಯಾಗಿ ನಿಂತ ಬಳಿಕ ನಗಾರಿಯನ್ನು ಬಾರಿಸಿರಿ" ಎಂದು ಧನಂಜಯ ಶೇಠರು ಸೇವಕರನ್ನು ಆಜ್ಞಾಪಿಸಿದರು. ಸೇವಕರು ಅಪ್ಪಣೆಯಾದಂತೆ ನಿಂತುಕೊಂಡು ನಗಾರಿಗಳನ್ನು ಬಾರಿಸಿದ ಬಳಿಕ, ಗೋಕುಲ ದ್ವಾರಗಳಿಂದ ಗೋವುಗಳು ಹೊರಬಂದವು ; ಮೂರು ಹರಿದಾರಿ ಉದ್ದ 140 ಅಗಲದ ಜಾಗ ತುಂಬ ಲಕ್ಷುಗಳು ಕೊಡಿದ್ದ ಬಳಿಕ ಚಿಕ್ಕ ಗೋಕುಲದ ಬಾಗಿಲುಗಳನ್ನು ಮುಚ್ಚಲು ಸೇವಕರನ್ನು ಧನಂಜಯ ಶೇಠರು ಆಜ್ಞೆ ಮಾಡಿದರು. ಬಾಗಿಲುಗಳನ್ನು ಮುಚ್ಚುತ್ತಿದ್ದಂತೆ 60000 ಆಕಳುಗಳು, 60000 ಎತ್ತುಗಳು, 60000 ಕರುಗಳು ಹೊರಹೊರಡಿದವು. ಇದರ ಮೇಲಿಂದ ಆ ಚಿಕ್ಕ ಗೋಕುಲದಲ್ಲಿದ್ದ ಅಪಾರ ಗೋಸಂಪತ್ತಿಯ ಕಲ್ಪನೆ ಬರುತ್ತದೆ.

ಆ ಕಾಲದಲ್ಲಿ ಗೋವುಗಳನ್ನು ಮಾರಾಟ ಮಾಡುವ ಸಂಪ್ರದಾಯವಿರಲಿಲ್ಲ ಗೋವನ್ನು ಭಕ್ತಿಭಾವದಿಂದ ಸಾಕಿ ಸಲಹುವದು, ಅವಶ್ಯವಿದ್ದವರಿಗೆ ದಾನ ಮಾಡುವುದು ಇದೇ ರೀತಿ ಗೋವಿನ ವ್ಯವಹಾರ ನಡೆದಿತ್ತು.

ಗೋಹತ್ಯೆ ಯಾರೂ ಮಾಡುತ್ತಿರಲಿಲ್ಲ. [ಆರ್ಯರ ದಿನಚರ್ಯೆ]

ಹಾಲಿನ ಕ್ಷಾಮಕ್ಕೆ ಇದು ಕಾರಣವಲ್ಲವೆ ?

ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳಾದಲ್ಲಿ ಹಾಲಿನ ಅಭಾವವಿರುವುದಾದರೂ, ಅಲ್ಲಿಯ ಮುಖ್ಯಮಂತ್ರಿಗಳು ಗೋರಕ್ಷಣಾ ವಿಚಾರಣಾ ಸಮಿತಿಗೆ, ತಾವು ಗೋಹತ್ಯಾನಿಷೇಧಕ್ಕೆ ವಿರುದ್ಧವೆಂದು ತಿಳಿಸಿದ್ದಾರೆ.



.... ಐತಿಹಾಸಿಕ ಭವ್ಯತೆಯ ಕ್ಷಣಿಯ ಭಾರಿ ಇಳುವರಿ ....

Cow Slaughter should be banned Immediately

ವುಡ್‌ಲಾಂಡ್ಸ್ ಜನಭರಿತ 3 ನೇ ವಾರ
ಪ್ರದರ್ಶನ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ —
ನೀಲ್ ಕಮಲ್ ★ Neel Kamal
ಈಸ್ಟ್‌ಮನ್ ಕಲರ್
.... ಮಿಲಿಯುಗಳ್ಲಿ ತೂಪಾಮಿನ ಆತ್ಯಾಕರ್ಷಣೀಯೆ ಹಿಂದಿ ಚಿತ್ರ ....
ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— ಜನಪ್ರಿಯ 5 ನೇ ವಾರ
ಚಿತ್ತಾಕರ್ಷ ಹಿಂದಿ ಚಿತ್ರ
ಬ್ರಹ್ಮಚಾರಿ
ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Printing — Neat Binding
Lakshminarasimha Press
Sivarampet, Mysore

ಆಶೋಕ ವಿಜೆನ್ಸಿನ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳೂನ್ನು ಲಿ ದೊರೆಯುತ್ತವೆ

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4